**ಸಾಕ್ಷಿಗೆ ದಿನಾಂಕಃ 03.03.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ. ಬಿ.ಪಿ.ಎಂ. ವಕೀಲರಿಂದಃ</u>**

ನಾನು ಎಸ್.ಎಸ್.ಎಲ್.ಸಿ.ಯವರೆಗೆ ಓದಿರುತ್ತೇನೆ. ನಾನು ಬೇಕರಿಯ ವ್ಯವಹಾರ ನಡೆಸುತ್ತಿದ್ದೇನೆ. ಆರೋಪಿ ನನಗೆ ಗೊತ್ತು. ಅವರು ಸುಮಾರು 6-7 ವರ್ಷದಿಂದ ಪರಿಚಯ ಇರುತ್ತಾರೆ. ದಿ.24.10.2020 ರಂದು ಆರೋಪಿಯು ನನ್ನ ಬಳಿ 3 ಲಕ್ಷ ರೂ.ಗಳನ್ನು ಪಡೆದಿರುತ್ತಾರೆ. ಆರೋಪಿಯು ಹಣ ಕೇಳಿದ 3-4 ದಿನದ ನಂತರ ನೀಡಿರುತ್ತೇನೆ. ನಾನು ನಗದು ರೂಪದಲ್ಲಿ ಹಣವನ್ನು ಆರೋಪಿಗೆ ನೀಡಿರುತ್ತೇನೆ. ರೂ.500/-ಗಳ ಮುಖ ಬೆಲೆಯ ನೋಟುಗಳನ್ನು ನೀಡಿರುತ್ತೇನೆ. ಹಣವನ್ನು ಆರೋಪಿಯ ಅಂಗಡಿಯ ಬಳಿ ನೀಡಿರುತ್ತೇನೆ. ಸದರಿ ಹಣವನ್ನು ಹೊರತುಪಡಿಸಿ ಬೇರೆ ಹಣದ ವ್ಯವಹಾರ ಆರೋಪಿಯ ಜೊತೆ ನಡೆದಿರುವುದಿಲ್ಲ. 3 ಲಕ್ಷ ರೂ.ಗಳನ್ನು ಆನ್ ಲೈನ್ ನಲ್ಲಿ ವರ್ಗಾವಣೆ ಮಾಡಲು ತೊಂದರೆ ಇರಲಿಲ್ಲ.

ನಾನು ಫೈನಾನ್ಸ್ ವ್ಯವಹಾರವನ್ನು ನಡೆಸುತ್ತೇನೆ ಎಂದರೆ ಸರಿಯಲ್ಲ. ನಾನು ರೂ.50,000/- ಮತ್ತು ರೂ.1,00,000/-ಕ್ಕೆ ಬಡ್ಡಿ ವ್ಯವಹಾರವನ್ನು ಮಾಡುತ್ತಿದ್ದು ಅದರಂತೆ ಆರೋಪಿಗೂ ಸಹ ಬಡ್ಡಿಗೆ ಹಣವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ 50,000/-ಗಳನ್ನು ಸಾಲವಾಗಿ ಪಡೆದಿದ್ದು, ಅದರಲ್ಲಿ ರೂ.6,000/-ಗಳನ್ನು ಹಿಡಿದು ಉಳಿದ ರೂ.44,000/- ಗಳನ್ನು ಆರೋಪಿಗೆ ನೀಡಿದ್ದು, ಆರೋಪಿಯು ಪ್ರತಿ ದಿನ ರೂ.500/-ಗಳನ್ನು 100 ಕಂತುಗಳಲ್ಲಿ ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿ ದಿನ ನಾನು ರೂ.500/-ಗಳನ್ನು ಪಡೆಯಲು ಆರೋಪಿಯ ಅಂಗಡಿ ಬಳಿ ಹೋಗುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಆರೋಪಿಯ ಅಂಗಡಿಯ ಬಳಿ ಹೋಗದ ಸಂದರ್ಭದಲ್ಲಿ ಆರೊಪಿಯು ನನಗೆ ಆನ್ ಲೈನ್ ಮೂಲಕ ಹಣವನ್ನು ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯು ಈಗಾಗಲೇ 30 ಕಂತುಗಳಲ್ಲಿ ಹಣವನ್ನು ನನಗೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಣವನ್ನು ಆರೋಪಿಯಿಂದ ಪಡೆದ ಮೇಲೆ ಪ್ರತಿದಿನ ಒಂದು ಸಣ್ಣ ಬುಕ್ಕಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಆರೋಪಿ ನೀಡಿದ ಚೆಕ್ ನ್ನು ನಾನೇ ಭರ್ತಿ ಮಾಡಿ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯು ನನ್ನಿಂದ  ಎರಡು ಬಾರಿ ರೂ.50,000/-ಗಳನ್ನು ಸಾಲವಾಗಿ ಪಡೆದಿದ್ದು, ಅದನ್ನು ಮರು ಪಾವತಿ ಮಾಡಿದ್ದು, ತದನಂತರ ನಾನು ರೂ.50,000/-ಗಳನ್ನು ಸಾಲವಾಗಿ ಆರೋಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಮೊದಲು ನೀಡಿದ ಚೆಕ್ ನ್ನೆ ಸದರಿ ರೂ.50,000/-ಗಳಿಗೆ ಭದ್ರತೆಗಾಗಿ ಅಳವಡಿಸಿಕೊಂಡಿರುತ್ತೇನೆ ಎಂದಸರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ನಡೆದ ವ್ಯವಹಾರದಲ್ಲಿ ನಮ್ಮಿಬ್ಬರ ಸಂಬಂಧ ಚೆನ್ನಾಗಿ ಇತ್ತು ಎಂದರೆ ಸಾಕ್ಷಿಯು ಸದರಿ ಚೆಕ್ಕಿನ ಹಣವನ್ನು ಹೊರತು ಪಡಿಸಿ ಬೇರೆ ವ್ಯವಹಾರ ನಡೆದಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಬೇರೆಯವರಿಗೆ ಹಣವನ್ನು ನೀಡಿ ವಸೂಲು ಮಾಡುತ್ತಿರುವುದರಿಂದ ನನ್ನನ್ನು ಫೈನಾನ್ಸ್‌ಸುರೇಶ್ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ.

ಆರೋಪಿಯು ನನಗೆ ನೀಡಿದ ಚೆಕ್ ಸಂ.399083 ಆಗಿರುತ್ತದೆ. ನಾನು ಹಣವನ್ನು ಆರೋಪಿಗೆ ನೀಡಿರುತ್ತೇನೆ ಎಂದು ಹೇಳುವ ಮೊದಲು Bindu jeera distributor ವ್ಯವಹಾರವನ್ನು ನಡೆಸುತ್ತಿದ್ದರು ಎಂದರೆ ಸರಿಯಲ್ಲ. ನಿ.ಪಿ.1 ನ್ನು ಭದ್ರತೆಗಾಗಿ ನೀಡಿದ ಚೆಕ್ಕನ್ನು ಆರೋಪಿಯೇ ತುಂಬಿಸಿರುತ್ತಾರೆ. ನನ್ನ ಬಳಿ 3 ಲಕ್ಷ ರೂ. ಇದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.  ಆರೋಪಿಗೆ ನಾನು ಯಾವುದೇ ಹಣವನ್ನು ನೀಡಿರುವುದಿಲ್ಲ ಹಾಗೂ ಆರೋಪಿಯು ಮಾಡಿದ ಸಾಲಕ್ಕೆ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರಪಯೋಗಪಡಿಸಿಕೊಂಡು ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟಿಸನ್ನು ನೀಡಿದ ಮೇಲೆ ಆರೋಪಿಯು ಉಳಿಕೆ ಹಣವನ್ನು ಪಾವತಿ ಮಾಡುವುದಾಗಿ ನನ್ನ ಮನೆಯ ಬಳಿ ಹಲವಾರು ಬಾರಿ ಬಂದಿದ್ದು, ಆದರೆ ಹಣವನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ರೂ.3 ಲಕ್ಷ ಹಣ ಬೇಕರಿಯ ವ್ಯವಹಾರದಿಂದ ಬಂದಿರುತ್ತದೆ.

**ಮರು ವಿಚಾರಣೆ ಇರುವುದಿಲ್ಲ.**
**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**